# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343

ಇ-ಮೇಲ್ ವಿಳಾಸ : director.ahr.kptcl@gmail.com


**ಓದಲಾಗಿದೆ:**

1. ನಿಗಮದ ನೌಕರರ/ಅಧಿಕಾರಿಗಳಿಗೆ ದಿನಾಂಕ: 01.04.2022 ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಿಸಿದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/33357/2022-23 ಮತ್ತು ಕವಿಪ್ರನಿನಿ/ಬಿ16/33358/2022-23 ದಿನಾಂಕ: 20.03.2023.
2. ನಿಗಮದ ನೌಕರರ/ಅಧಿಕಾರಿಗಳ ವೇತನ ಪರಿಷ್ಕರಣೆಯ ಆದೇಶಾನುಸಾರ ದಿನಾಂಕ: 01.04.2022 ರಿಂದ 31.03.2023 ರವರೆಗಿನ ವೇತನ ಬಾಕಿ ಪಾವತಿಯ ಬಗ್ಗೆ ಹೊರಡಿಸಿದ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/33357(1)/2022-23 ದಿನಾಂಕ: 15.05.2023.
3. ನಿಗಮದ ನೌಕರರ/ಅಧಿಕಾರಿಗಳಿಗೆ ದಿನಾಂಕ: 01.04.2022 ರಿಂದ 31.03.2023 ರವರೆಗಿನ ಪರಿಷ್ಕೃತ ವೇತನ ಬಾಕಿ ಮೊತ್ತದಲ್ಲಿ ಶೇ.2 ರಷ್ಟು ಮುರಿಕೆ ಮಾಡಿ ಸಂಘಕ್ಕೆ ರವಾನಿಸುವ ಬಗ್ಗೆ ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(659), ಬೆಂಗಳೂರು ಇವರ ದಿನಾಂಕ: 02.05.2023 ರ ಪತ್ರ ಸಂಖ್ಯೆ: 65/23-24.
4. ನಿಗಮದ ನೌಕರರ/ಅಧಿಕಾರಿಗಳಿಗೆ ದಿನಾಂಕ: 01.04.2022 ರಿಂದ 31.03.2023 ರವರೆಗಿನ ಪರಿಷ್ಕೃತ ವೇತನ ಬಾಕಿ ಮೊತ್ತದಲ್ಲಿ ಶೇ.2 ರಷ್ಟು ಮುರಿಕೆ ಮಾಡಿ ಸಂಘಕ್ಕೆ ರವಾನಿಸುವ ಬಗ್ಗೆ ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು ರವರ ದಿನಾಂಕ: 29.04.2023 ರ ಪತ್ರ ಸಂಖ್ಯೆ: 495/23-24.
5. ಕವಿಮಂ ಇಂಜಿನಿಯರುಗಳ ಸಂಘದ ಸದಸ್ಯರುಗಳ 2022-23 ನೇ ಸಾಲಿನ ಪರಿಷ್ಕೃತ ವೇತನದ ಬಾಕಿ ಪಾವತಿ ಮೊತ್ತದಲ್ಲಿ ಶೇ.5 ವ್ಯತ್ಯಾಸ ಮೊತ್ತವನ್ನು ಮೊದಲನೇ ಕಂತಿನಲ್ಲಿ ಮುರಿಕೆ ಮಾಡಿ ಸಂಘಕ್ಕೆ ರವಾನಿಸುವ ಬಗ್ಗೆ ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು ರವರ ದಿನಾಂಕ: 05.05.2023 ರ ಪತ್ರ ಸಂಖ್ಯೆ: 04/2023-24.
6. ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದ ಸದಸ್ಯರುಗಳ 2022-23 ನೇ ಸಾಲಿನ ಪರಿಷ್ಕೃತ ವೇತನದ ಒಟ್ಟು ಬಾಕಿ ಮೊತ್ತದಲ್ಲಿ ಶೇ. 3 ರಷ್ಟು ಕಡಿತಗೊಳಿಸಿ ಸಂಘಕ್ಕೆ ಪಾವತಿ ಮಾಡುವಂತೆ ಕೋರಿರುವ ಪತ್ರ ಸಂಖ್ಯೆ:07/2023-24, ದಿನಾಂಕ: 15.05.2023.
7. ಮೇಲಿನ ಎಲ್ಲಾ ನೌಕರರು/ಅಧಿಕಾರಿಗಳ ಸಂಘಗಳ ಮನವಿಯಂತೆ ಪರಿಷ್ಕೃತ ವೇತನ ಬಾಕಿ ಮೊತ್ತದ ಮೋದಲನೇ ಕಂತಿನಲ್ಲಿ ದೇಣಿಗೆಯನ್ನು ಕಡಿತಗೊಳಿಸಲು ನಿಗಮದಿಂದ ಆದೇಶ ಸಂಖ್ಯೆ: ಕವಿಪ್ರನಿನಿ/ಹಿಸ7/3224/1997-98, ದಿನಾಂಕ: 15.05.2023 ನ್ನು ಹೊರಡಿಸಲಾಗಿರುತ್ತದೆ.
8. ಶ್ರೀ. ಕೆ. ಚಂದ್ರಶೇಖರ್ ರವರು ಮಾನ್ಯ ಉಚ್ಚ ನ್ಯಾಯಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ: 10454/2023 ರಲ್ಲಿ ಮಾನ್ಯ ಉಚ್ಚ ನ್ಯಾಯಲಯವು ದಿನಾಂಕ: 25.05.2023 ರಂದು ಕವಿಪ್ರನಿನಿಯ ಮೇಲಿನ ಆದೇಶ ಸಂಖ್ಯೆ: ಕವಿಪ್ರನಿನಿ/ಹಿಸ7/3224/1997-98, ದಿನಾಂಕ: 15.05.2023 ನ್ನು ಮುಂದಿನ ವಿಚಾರಣಾ ದಿನಾಂಕದವರೆಗೆ ಜಾರಿಗೊಳಿಸದಂತೆ ಹಾಗೂ ಕಾರ್ಯಗತಗೊಳಿಸದಂತೆ ತಡೆಯಾಜ್ಞೆ ನೀಡಿತು. ಸದರಿ ತಡೆಯಾಜ್ಞೆ ಪಾಲನೆಗಾಗಿ ಆದೇಶ ಸಂಖ್ಯೆ: ಕವಿಪ್ರನಿನಿ/ಹಿಸ7/3224/1997-98, ಬೆಂಗಳೂರು, ದಿನಾಂಕ: 29.05.2023 ನ್ನು ಹೊರಡಿಸಲಾಗಿದೆ.
9. ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 30.05.2023 ರಂದು ಮೇಲಿನ ರಿಟ್ ಅರ್ಜಿಯನ್ನು ಇತ್ಯರ್ಥಗೊಳಿಸುತ್ತಾ, ಯಾವುದೇ ನೌಕರ/ಅಧಿಕಾರಿಗಳ ಸಮ್ಮತಿ ಇಲ್ಲದೇ ದೇಣಿಗೆ ಕಡಿತಗೊಳಿಸದಂತೆ ಹಾಗೂ ಸ್ವ-ಇಚ್ಛೆಯಿಂದ ದೇಣಿಗೆ ಕಡಿತಗೊಳಿಸಲು ಸಮ್ಮತಿ ನೀಡುವ ನೌಕರರ/ಅಧಿಕಾರಿಗಳಿಂದ ದೇಣಿಗೆ ಕಡಿತಗೊಳಿಸಬಹುದಾಗಿ ನಿರ್ದೇಶನ ನೀಡಿರುತ್ತದೆ.
10. ಕವಿಪ್ರನಿ ನೌಕರರ ಸಂಘದ ಪ್ರಧಾನ ಕಾರ್ಯಾದರ್ಶಿ ರವರ ಪತ್ರ ದಿನಾಂಕ: 09.06.2023 ರಲ್ಲಿ ನೌಕರರಿಂದ ಶೇಕಡ 2 ರಷ್ಟು ದೇಣಿಗೆ ಕಡಿತಗೊಳಿಸಲು ನಿಗಮದ ಆದೇಶ ಹೊರಡಿಸುವಂತೆ ಮನವಿ ಮಾಡಿರುತ್ತಾರೆ.
11. ಸದರಿ ಮನವಿಯನ್ನು, ನ್ಯಾಯಾಲಯದ ನಿರ್ದೇಶನದನ್ವಯ ಪರಿಗಣಿಸಿ, ದೇಣಿಗೆ ಕಡಿತಗೊಳಿಸಲು ಈ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಹಿಸ7/3224/1997-98, ಬೆಂಗಳೂರು, ದಿನಾಂಕ:** 14 JUN 2023

ನಿಗಮದ ನೌಕರರು/ಅಧಿಕಾರಿಗಳಿಗೆ ದಿನಾಂಕ: 01.04.2022 ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆಯಾಗಿರುವ ಹಿನ್ನಲೆಯಲ್ಲಿ ದಿನಾಂಕ: 01.04.2022 ರಿಂದ 31.03.2023 ರವರೆಗಿನ ಪರಿಷ್ಕರಿಸಿರುವ ವೇತನದ

ಬಾಕಿ ಮೊತ್ತದ ಎರಡನೇ ಕಂತನ್ನು ಪಾವತಿಸುವಾಗ **ಸಮ್ಮತಿ ಪತ್ರ ನೀಡುವ ನೌಕರರ/ಅಧಿಕಾರಿಗಳ ವೇತನದಲ್ಲಿ,** ಈ ಕೆಳಕಂಡ ದರದಲ್ಲಿ ದೇಣಿಗೆ ಮುರಿಕೆ ಮಾಡಿ, ಸದರಿ ಒಟ್ಟು ಮೊತ್ತವನ್ನು ವೇತನ ಬಟವಾಡೆ ಅಧಿಕಾರಿಗಳು ದೇಣಿಗೆ ನೀಡಿರುವ ನೌಕರ/ಅಧಿಕಾರಿಗಳ ವಿವರವುಳ್ಳ ಪಟ್ಟಿಯೊಂದಿಗೆ ಸಂಬಂಧಿಸಿದ ಸಂಘ/ಸಂಸ್ಥೆಗಳ **"ಪ್ರಧಾನ ಕಾರ್ಯದರ್ಶಿ"** ರವರ ಸಂಘದ ಹೆಸರಿನಲ್ಲಿ ಚೆಕ್ ಮೂಲಕ ಪಾವತಿಸಲು ಅನುಮೋದನೆ ನೀಡಲಾಗಿದೆ:-

| **ಕ್ರ.ಸಂ** | **ಸಂಘದ ಹೆಸರು** | **ಬಾಕಿ ಮೊತ್ತ ಮುರಿಕೆ ವಿವರ** | **ಚೆಕ್ ಇವರ ಹೆಸರಿಗೆ ನೀಡುವುದು** |
|---|---|---|---|
| 1 | ಕವಿಪ್ರನಿ ನೌಕರರ ಸಂಘ(ರಿ.ಸಂ.659) | ನಿಗಮದ ನೌಕರರು/ಅಧಿಕಾರಿಗಳಿಗೆ ವೇತನ ಪರಿಷ್ಕರಣೆ ಪಾವತಿಸುವ ಸಂಪೂರ್ಣ ಬಾಕಿ ಮೊತ್ತದಲ್ಲಿ ಶೇ.2 ರಷ್ಟನ್ನು **ಜೂನ್-2023 ರ ತಿಂಗಳಿನ ಕಂತಿನಲ್ಲಿ ಮುರಿಕೆ ಮಾಡಿ ಸಂಘಕ್ಕೆ ಪಾವತಿಸುವುದು.** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ರಿ.ಸಂ.659). |
| 2 | ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ | ನಿಗಮದ ನೌಕರರು/ಅಧಿಕಾರಿಗಳಿಗೆ ವೇತನ ಪರಿಷ್ಕರಣೆ ಪಾವತಿಸುವ ಸಂಪೂರ್ಣ ಬಾಕಿ ಮೊತ್ತದಲ್ಲಿ ಶೇ.2 ರಷ್ಟನ್ನು **ಜೂನ್-2023 ರ ತಿಂಗಳಿನ ಕಂತಿನಲ್ಲಿ ಮುರಿಕೆ ಮಾಡಿ ಸಂಘಕ್ಕೆ ಪಾವತಿಸುವುದು.** | ಪ್ರಧಾನ ಕಾರ್ಯದರ್ಶಿ, ಕವಿಮಂ ಪ.ಜಾ/ಪ.ವ ಕಲ್ಯಾಣ ಸಂಸ್ಥೆ (ರಿ.466). ಕೆ.ಆರ್.ವೃತ್ತ, ಬೆಂಗಳೂರು |
| 3 | ಕವಿಮಂ ಇಂಜಿನಿಯರುಗಳ ಸಂಘ | ಸಂಘದ ಸದಸ್ಯರುಗಳ ವೇತನ ಪರಿಷ್ಕರಣೆ ಸಂಪೂರ್ಣ ಬಾಕಿ ಮೊತ್ತದಲ್ಲಿ ಶೇ.5 ರಷ್ಟನ್ನು **ಜೂನ್-2023 ರ ತಿಂಗಳಿನ ಕಂತಿನಲ್ಲಿ ಮುರಿಕೆ ಮಾಡಿ ಸಂಘಕ್ಕೆ ಪಾವತಿಸುವುದು.** | ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ. |
| 4. | ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸಂಘದ ಸದಸ್ಯರುಗಳ ವೇತನ ಪರಿಷ್ಕರಣೆ ಸಂಪೂರ್ಣ ಬಾಕಿ ಮೊತ್ತದಲ್ಲಿ **ಶೇ.3** ರಷ್ಟನ್ನು **ಜೂನ್-2023 ರ ತಿಂಗಳಿನ ಕಂತಿನಲ್ಲಿ ಮುರಿಕೆ ಮಾಡಿ ಸಂಘಕ್ಕೆ ಪಾವತಿಸುವುದು.** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ |

ಮುಂದುವರೆಯುತ್ತಾ, ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಹಿಸ7/3224/1997-98 ದಿನಾಂಕ: 15.05.2023 ನ್ನು ಸಂಪೂರ್ಣವಾಗಿ ಹಿಂಪಡೆಯಲಾಗಿದೆ.

{ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ
ರವರಿಂದ ಅನುಮೋದಿಸಲ್ಪಟಿದೆ}

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),**
**ಕವಿಪ್ರನಿನಿ**

**ಪ್ರತಿಯನ್ನು ಮಾಹಿತಿಗಾಗಿ:**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲಾ ನಿರ್ದೇಶಕರು(ತಾಂತಿಕ), ಎಸಾಂಗಳು.

3. ನಿರ್ದೇಶಕರು (ಹಣಕಾಸು), ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
5. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
6. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು(ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ),
7. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂಗಳು.

**https://kptcl.karnataka.gov.in** for information of:

8. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
10. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
11. ಎಲ್ಲಾ ಲೆಕ್ಕಾಧಿಕಾರಿಗಳು/ಲೆಕ್ಕಾಧಿಕಾರಿಗಳು (ಆಂ.ಪ), ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್.

**ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-**

12. ಶ್ರೀ. ಲಕ್ಷ್ಮಿಪತಿ, ಆರ್.ಹೆಚ್. ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
13. ಶ್ರೀ.ಶಿವಣ್ಣ. ಕೆ. ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
14. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
15. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
16. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
17. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
18. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
19. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.